# ಕನ್ನಡ ನಾಡು ನುಡಿಗೆ ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳು

**ಲಕ್ಷ್ಮಿನರಸಮ್ಮ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್.

**Received: 02-05-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672890**

**ABSTRACT:**

ನಾಲ್ವಡಿ ಕೃಷ್ಣರಾಜ ಒಡೆಯರು ಆಧುನಿಕ ಕನ್ನಡ ನಾಡಿನ ನಿರ್ಮಾತೃ ಆಗಿದ್ದು ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರನ್ನು ಬಹಳಷ್ಟು ಅಭಿವೃದ್ಧಿ ಪಡಿಸುವ ಮೂಲಕ ಸಿಲಿಕಾನ್ ಸಿಟಿಯನ್ನಾಗಿ ಜನಪ್ರಿಯಗೊಳಿಸಿದ್ದಾರೆ. ಕನ್ನಡ ನಾಡಿನ ಮೈಸೂರು ಸಂಸ್ಥಾನದ 24ನೇಯ ರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಸಂಗೀತ ಮತ್ತು ಕುದುರೆ ಸವಾರಿಯನ್ನು ಕಲಿತಿದ್ದರು. ಇವರು 1902ರಲ್ಲಿ ಕರ್ನಾಟಕದ ಶಿವನಸಮುದ್ರದಲ್ಲಿ ಜಲ ವಿದ್ಯುತ್ ಯೋಜನೆಯನ್ನು, 1903ರಲ್ಲಿ ಮಿಂಟೋ ಕಣ್ಣಿನ ಆಸ್ಪತ್ರೆಯನ್ನು, 1905ರಲ್ಲಿ ಬೆಂಗಳೂರಿನಲ್ಲಿ ಬೀದಿ ದೀಪಗಳನ್ನು ಸ್ಥಾಪನೆ ಮಾಡುವ ಮೂಲಕ ಬೆಂಗಳೂರನ್ನು ಏಷ್ಯಾದಲ್ಲಿಯೇ ಮೊದಲ ನಗರವನ್ನಾಗಿ ಮಾಡಿ ಅಪಾರವಾದ ಕೊಡುಗೆಗಳನ್ನು ನೀಡಿದ್ದಾರೆ. ಇಷ್ಟೇ ಅಲ್ಲದೇ ನಾಲ್ವಡಿ ಕೃಷ್ಣರಾಜ ಒಡೆಯರು ಕನ್ನಡ ನುಡಿಯನ್ನು ಬೆಳೆಸಿ ಉಳಿಸಬೇಕೆಂಬ ಮಹಾದಾಸೆಯಿಂದ 1915ರಲ್ಲಿ ಮೊಟ್ಟ ಮೊದಲಿಗೆ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿ ಹಲವಾರು ಕವಿಗಳನ್ನು ಗುರುತಿಸುತ್ತಾರೆ. 1916 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು, 1917ರಲ್ಲಿ ಮೈಸೂರು ಮಹಾರಾಣಿ ಕಾಲೇಜನ್ನು, ಮೈಸೂರು ಪೇಪರ್ಸ್ ಮಿಲ್ ಅನ್ನು ಸ್ಥಾಪಿಸಿ ಬೆಳೆಸುವಲ್ಲಿ ಮುಂದಾಗುತ್ತಾರೆ. ಕನ್ನಡ ನಾಡು ನುಡಿಗಾಗಿ ಮಾಡಿದ ಸೇವೆಗಳಿಂದ ಅವರು ನವ ಕರ್ನಾಟಕದ ಪಿತಾಮಹ ಎಂಬ ಬಿರುದಿಗೆ ಭಾಜನರಾಗುತ್ತಾರೆ. ನಾಲ್ವಡಿ ಕೃಷ್ಣರಾಜ ಒಡೆಯರು ಕನ್ನಡ ನಾಡು ನುಡಿಗಾಗಿ ಸಲ್ಲಿಸಿದ ಕೊಡುಗೆಗಳನ್ನು ಕುರಿತಂತೆ ಸವಿಸ್ತಾರವಾಗಿ ವಿಶ್ಲೇಷಣೆ ಮಾಡುವುದೇ ಈ ಲೇಖನದ ಪ್ರಧಾನ ಧೋರಣೆಯಾಗಿದೆ.

**KEYWORDS:**

ಮೈಸೂರು, ಕನ್ನಡ ನಾಡಿನ ನಿರ್ಮಾತೃ, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯ, ನಾಡು-ನುಡಿ, ಕನ್ನಡ, ಮಿಂಟೋ ಕಣ್ಣಿನ ಆಸ್ಪತ್ರೆ.

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1884 ರ ಜೂನ್ 4 ರಂದು ಮೈಸೂರು ಸಂಸ್ಥಾನದ ಮಹಾರಾಜರಲ್ಲಿ ಹತ್ತನೆಯ ಮಹಾರಾಜರಾದ ಚಾಮರಾಜೇಂದ್ರ ಒಡೆಯರ್ ಮತ್ತು ಮಹಾರಾಣಿ ಕೆಂಪ ನಂಜಮ್ಮಣ್ಣಿ ಅವರ ಮೊದಲನೆಯ ಮಗನಾಗಿ ಮೈಸೂರು ಅರಮನೆಯಲ್ಲಿ ಜನಿಸಿದರು. ಕಾಲಕ್ರಮೇಣ ಚಾಮರಾಜೇಂದ್ರ ಒಡೆಯರು ಕಾಲವಾಗಿದ್ದರಿಂದ ರಾಜ್ಯಭಾರವನ್ನು ಕೆಂಪನಂಜಮ್ಮಣ್ಣಿಯವರು ತಮ್ಮ ಮಗನಿಗೆ 18 ವರ್ಷ ವಯಸ್ಸು ತುಂಬುವವರೆಗೂ ನಾಲ್ಕನೇ ಕೃಷ್ಣರಾಜ ಒಡೆಯರ ಪರವಾಗಿ ರಾಜ ಪ್ರತಿನಿಧಿಯಾಗಿ ಆಳುತ್ತಾರೆ. ಅಂದು ಮಹಿಳೆಯರಿಗೂ ರಾಜ್ಯದ ಆಡಳಿತವನ್ನು ನಡೆಸುವ

ಅಧಿಕಾರವನ್ನು ಕೊಟ್ಟಿದ್ದು ಮಹಿಳೆಯರ ಹೆಮ್ಮೆಯ ವಿಷಯವಾಗಿದೆ. 1902ರಲ್ಲಿ ಹದಿನೆಂಟು ವರ್ಷ ಪೂರೈಸಿದ ಕೃಷ್ಣರಾಜ ಒಡೆಯರನ್ನು ಅಂದು ಬ್ರಿಟೀಷ್ ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನನು ವಿಧ್ಯುಕ್ತವಾಗಿ ಮೈಸೂರಿನ ಮಹಾರಾಜರೆಂದು ಘೋಷಣೆ ಮಾಡುತ್ತಾರೆ. ಅಂದಿನಿಂದ ನಾಲ್ವಡಿ ಕೃಷ್ಣರಾಜ ಒಡೆಯರು ಕರ್ನಾಟಕ ರಾಜ್ಯವನ್ನು ಪ್ರಗತಿಯತ್ತ ಕೊಂಡೊಯ್ಯಬೇಕೆಂದು ನಾನಾ ರೀತಿಯಲ್ಲಿ ಸೌಲಭ್ಯಗಳನ್ನು ನೀಡುವಲ್ಲಿ ಮುಂದಾಗುತ್ತಾರೆ. ಕನ್ನಡ ನಾಡು-ನುಡಿ ಜೀವಂತಿಕೆಯನ್ನು ಪಡೆದಿದೆ ಎಂದರೆ ಅದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರೇ ಕಾರಣ ಎನ್ನುವುದು ನಮಗೆಲ್ಲಾ ತಿಳಿದ ಮಹತ್ವದ ವಿಷಯವಾಗಿದೆ.

ಕುದುರೆ ಸವಾರಿ ಮತ್ತು ಸಂಗೀತದಲ್ಲಿ ಪ್ರಾವೀಣ್ಯತೆ ಹೊಂದಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಕರ್ನಾಟಕಕ್ಕೆ ಮಾಡಿದ ಸೇವೆ ಅಪಾರವಾದದ್ದು. ಭಾರತದ ಸಂವಿಧಾನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರು ನೀಡಿದ್ದ ಮೀಸಲಾತಿಯಿಂದ ಎಷ್ಟೋ ಬಡಜೀವಿಗಳು, ಅಲ್ಪಸಂಖ್ಯಾತರು ಶಿಕ್ಷಣದಲ್ಲಿ, ರಾಜಕೀಯದಲ್ಲಿ ಪ್ರಯೋಜನಗಳನ್ನು ಪಡೆದು ಸ್ವತಃ ಬೆಳವಣಿಗೆ ಹೊಂದಲು ಸಾಧ್ಯವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರು ತನ್ನಿಂದ ಹಿಂದುಳಿದ ವರ್ಗಗಳಿಗೆ ಸೌಲಭ್ಯ ದೊರಕುವಂತೆ ಶೇಕಡಾ 75 ರಷ್ಟು ಮೀಸಲಾತಿಯ ಆದೇಶವನ್ನು ಹೊರಡಿಸಿದ್ದರಿಂದ ಕರ್ನಾಟಕದಲ್ಲಿ “ಮೀಸಲಾತಿಯ ಜನಕ” ಎಂಬ ಬಿರುದನ್ನು ಪಡೆದಿದ್ದಾರೆ. “ಆಡು ಮುಟ್ಟದ ಸೊಪ್ಪಿಲ್ಲ” ಎಂಬ ಗಾದೆಯಂತೆ ನಾಲ್ವಡಿ ಕೃಷ್ಣರಾಜ ಒಡೆಯರು ಕರ್ನಾಟಕಕ್ಕೆ ಮಾಡಿದ ಸೇವೆಯ ಕ್ಷೇತ್ರಗಳು ಬಹಳ. ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಆಡಳಿತ ವಿಕೇಂದ್ರೀಕರಣಕ್ಕೆ ಅವಕಾಶವನ್ನು ನೀಡಿ ಹಳ್ಳಿ ಹಳ್ಳಿಗಳಲ್ಲಿ ಗ್ರಾಮ ಪಂಚಾಯಿತಿಗಳು ಕೆಲಸ ಮಾಡಲು ಕಾರಣರಾಗುತ್ತಾರೆ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಜನರೆಲ್ಲರೂ ಆಡಳಿತದಲ್ಲಿ ಭಾಗಿಯಾಗುವಂತೆ ಪ್ರೇರಣೆಯನ್ನು ನೀಡುತ್ತಾರೆ. ಮೈಸೂರು ಸಂಸ್ಥಾನವನ್ನು, ಮಾದರಿ ಸಂಸ್ಥಾನವನ್ನಾಗಿ ರೂಪಿಸಲು ನಾಲ್ವಡಿ ಕೃಷ್ಣರಾಜ ಒಡೆಯರು ಸಾಮಾಜಿಕವಾಗಿ ಹಲವು ಕಾನೂನುಗಳನ್ನು ಜಾರಿಗೊಳಿಸುತ್ತಾರೆ. ಇದರಿಂದ ಸಮಾಜದಲ್ಲಿದ್ದ ಕೆಟ್ಟ ಪದ್ಧತಿಗಳು, ಆಚರಣೆಗಳು ನಾಶವಾಗಲು ಸಾಧ್ಯವಾಯಿತು. ಹೆಣ್ಣು ಮಕ್ಕಳಿಗೆ ಅತ್ಯಧಿಕವಾಗಿ ಕಾನೂನುಗಳನ್ನು ರೂಪಿಸಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ. ಅಂದು ಅವರು ಕಾನೂನುಗಳನ್ನು ಜಾರಿಗೊಳಿಸದಿದ್ದರೆ ಕರ್ನಾಟಕ ವಿಶ್ವಮಟ್ಟದಲ್ಲಿಯೇ ಪ್ರಗತಿ ಹೊಂದಲು ಸಾಧ್ಯವಾಗುತ್ತಿರಲಿಲ್ಲ. ಡಾ.ಬಿ.ಆರ್. ಅಂಬೇಡ್ಕರ್ ರವರು ಜಾರಿಗೊಳಿಸಿದ ಕಾನೂನುಗಳಿಗೆ ಬದ್ಧರಾಗಿ ಅವುಗಳನ್ನು ರಾಜ್ಯದಲ್ಲಿ ಕಾರ್ಯರೂಪಕ್ಕೆ ತಂದದ್ದು ಕನ್ನಡಿಗರ ಹೆಮ್ಮೆಯ ವಿಷಯ. ಹಲವಾರು ಕಾನೂನುಗಳ ಮೂಲಕ ಸಮಾಜದಲ್ಲಿನ ಅಂಧಾಕಾರಗಳನ್ನು ಹೋಗಲಾಡಿಸಲು ಸಾಧ್ಯವಿದೆ ಎಂಬುದನ್ನು ಅರಿತ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಆಡಳಿತ ಕಾಲದಲ್ಲಿ ವಿಭಿನ್ನ ಕಾನೂನುಗಳನ್ನು ಹೊರತರುತ್ತಾರೆ.

1909ರಲ್ಲಿ ದೇವದಾಸಿ ಪದ್ಧತಿ ನಿಷೇಧವನ್ನು ಜಾರಿಗೆ ತಂದಿದ್ದು ರಾಜ್ಯದಲ್ಲಿ ಹೆಣ್ಣು ಮಕ್ಕಳನ್ನು ದೇವರಿಗೆ ಮೀಸಲು ಎಂಬ ಆಲೋಚನೆ ನಾಶವಾಗಲು ಸಾಧ್ಯವಾಯಿತು. ಹೆಣ್ಣು ಮಕ್ಕಳ ರಕ್ಷಣೆ ಕಾಪಿಟ್ಟುಕೊಳ್ಳಲು ಅನುಕೂಲವಾಯಿತು. 1910 ರಲ್ಲಿ ಜಾರಿಗೆ ತಂದ ಬಸವಿ

ಪದ್ಧತಿ ರದ್ದತಿಯೂ ಕೂಡ ಮಹಿಳೆಯರನ್ನು ನೀಚತನಕ್ಕೆ ನೂಕುವ ಪರಿಪಾಠ ನಿಲ್ಲಲು ಕಾರಣವಾಯಿತು. 1910ರಲ್ಲಿ ' ಗೆಜ್ಜೆಪೂಜೆ ' ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುತ್ತಾರೆ. 1936 ರಂದು ವೇಶ್ಯಾವೃತ್ತಿ ತಡೆಗಟ್ಟುವ ಕಾನೂನನ್ನು ಜಾರಿಗೊಳಿಸುತ್ತಾರೆ. ಇದರಿಂದ ರಾಜ್ಯದಲ್ಲಿ ವೇಶ್ಯಾವಾಟಿಕೆಗಳು ಕಡಿಮೆಯಾಗಲು ಸಾಧ್ಯವಾಯಿತು. ವೇಶ್ಯಾವಾಟಿಕೆಯಲ್ಲಿ ಪಾಲ್ಗೊಳ್ಳುವ ಮಹಿಳೆಯರ ಸಂಖ್ಯೆ ಕಡಿಮೆಯಾಯಿತು. ಇಂದಿಗೂ ವೇಶ್ಯಾವಾಟಿಕೆ ಇದ್ದರೂ ಜನರಲ್ಲಿ ಭಯದ ವಾತಾವರಣವಿರುವುದು ನಾಲ್ವಡಿ ಕೃಷ್ಣರಾಜ ಒಡೆಯರಿಂದಲೇ ಎಂಬುದನ್ನು ಅರಿಯಬೇಕಾಗುತ್ತದೆ. ವಿಧವೆಯರು ಸಮಾಜದಲ್ಲಿ ನಿರ್ಭಯವಾಗಿ ಜೀವಿಸಬೇಕಾದರೆ, ಅದಕ್ಕೆ ಅವರು ಮರು ಮದುವೆಯಾಗಬೇಕೆಂದು ಅರಿತ ಒಡೆಯರು 1936 ಜುಲೈ 7 ರಂದು ವಿಧವೆಯರಿಗೆ ಮರು ವಿವಾಹ ಕಾಯ್ದೆಯನ್ನು ಜಾರಿಗೆ ತರುತ್ತಾರೆ. ಹೆಣ್ಣು ಸಬಲೆಯಾದರೆ ಅವಳು ಎಲ್ಲಾ ಕ್ಷೇತ್ರಗಳಲ್ಲೂ ಭಾಗವಹಿಸಿ ತನ್ನನ್ನು ತಾನು ಗುರುತಿಸಿಕೊಳ್ಳುತ್ತಾಳೆಂದು ಅರಿತು 1936 ರಲ್ಲಿ ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣವನ್ನು ರಾಜ್ಯದಲ್ಲಿ ಜಾರಿಗೆ ತರುತ್ತಾರೆ. 1914 ರಲ್ಲಿ ಶಾಲಾ ಪ್ರವೇಶಕ್ಕೆ ಜಾತಿ ಪರಿಗಣನೆಯ ನಿಷೇಧ ಸಾಮಾಜಿಕ ಕಾನೂನು ಹಾಗೂ ಉಚಿತ ಶಿಕ್ಷಣವನ್ನು ಜಾರಿಗೊಳಿಸಲು ಮಾಧ್ಯಮಿಕ ಶಾಲಾ ಮಟ್ಟದಲ್ಲಿ ಶಿಕ್ಷಣ ಶುಲ್ಕ ರದ್ದತಿಯನ್ನು ಜಾರಿಗೆ ತರುತ್ತಾರೆ. ರಾಜ್ಯದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ಮೊಟ್ಟ ಮೊದಲಿಗೆ 1927 ರಲ್ಲಿ ಕಲ್ಪಿಸುವುದರೊಂದಿಗೆ ಮತದಾನದಲ್ಲಿ ಸ್ತ್ರೀ ಸಮಾನತೆಯನ್ನು ಎತ್ತಿಹಿಡಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ. ಕಾರ್ಮಿಕರೆಲ್ಲ ನೆಮ್ಮದಿಯಾಗಿ ಬದುಕಲು ಅವರಿಗೆ 1905 ರಲ್ಲಿ ಸಹಕಾರಿ ಕಾರ್ಮಿಕ ಪರಿಹಾರ ಕಾಯ್ದೆಯನ್ನು ಹೊರತಂದು ಬೆಂಬಲವಾಗಿ ನಿಲ್ಲುತ್ತಾರೆ. ನಾಲ್ವಡಿ ಕೃಷ್ಣರಾಜ ಒಡೆಯರು ಕಾನೂನುಗಳ ಮೂಲಕ ರಾಜ್ಯವನ್ನು ಬದಲಿಸಲು ಸಾಧ್ಯವೆಂದು ಗ್ರಹಿಸಿ ಹಲವಾರು ಕಾಯ್ದೆಗಳನ್ನು ರಾಜ್ಯದಲ್ಲಿ ಜಾರಿಗೆ ತರುತ್ತಾರೆ. ಅಂದು ಅವರು ಮಾಡಿದ ಘನ ಕಾರ್ಯಗಳಿಂದ ಇಂದಿಗೂ ಕನ್ನಡ ನಾಡು ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಸಾಧ್ಯವಾಯಿತು. ಮಹಿಳೆಯರ ಸಬಲೀಕರಣಕ್ಕೆ ಸಂಬಂಧಿಸಿದಂತೆ ಹೆಚ್ಚು ಕಾಯಿದೆಗಳನ್ನು ಜಾರಿಗೆ ತಂದಂತಹ ಆಡಳಿತಾಧಿಕಾರಿಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಪ್ರಪ್ರಥಮ ಅಧಿಕಾರಿಯಾಗಿದ್ದಾರೆ. ಮಹಿಳೆಯರ ಮೇಲಿನ ಅತ್ಯಾಚಾರಗಳು ನಿಲ್ಲಬೇಕಾದರೆ ಅವರಿಗೆ ಸವಲತ್ತುಗಳನ್ನು ನೀಡುವುದು ಮೊದಲ ಆದ್ಯ ಕರ್ತವ್ಯ ಎಂಬುದನ್ನು ಒಡೆಯರು ನಂಬಿದ್ದರು.

ಕರ್ನಾಟಕದಲ್ಲಿ ಹಲವಾರು ಕಾನೂನುಗಳನ್ನು ಜಾರಿಗೆ ತಂದಿದ್ದರಿಂದ ರಾಜ್ಯದಲ್ಲಿ ಬಹಳ ಅಭಿವೃದ್ಧಿಯಾಯಿತು. ಅಂದು ಕರ್ನಾಟಕವನ್ನು ಮೈಸೂರು ಸಂಸ್ಥಾನ ಆಳುತ್ತಿದ್ದರಿಂದ ಕರುನಾಡನ್ನು ಪ್ರಗತಿಯತ್ತ ಕೊಂಡೊಯ್ಯುವ ಕೆಲಸ ನಾಲ್ವಡಿ ಕೃಷ್ಣರಾಜ ಒಡೆಯರಿಗಿತ್ತು. ಹಾಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ಕಾಯಿದೆಗಳನ್ನು ತರುವಲ್ಲಿ ಮುಂದಾಗುತ್ತಾರೆ. ಇದರಿಂದ ಒಡೆಯರು "ಸಾಮಾಜಿಕ ಕಾನೂನುಗಳ ಹರಿಕಾರ" ಎಂಬ ಬಿರುದಿಗೆ ಪಾತ್ರರಾಗುತ್ತಾರೆ. ಜನರಿಗೆ ಪ್ರಯಾಣ ಸೌಲಭ್ಯವನ್ನು ನೀಡಿದರೆ ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯವೆಂದು ಮನಗಂಡ ನಾಲ್ವಡಿ ಕೃಷ್ಣರಾಜ ಒಡೆಯರು ಹೊಸ ಹೊಸ ರೈಲು ದಾರಿಗಳನ್ನು ನಿರ್ಮಿಸುತ್ತಾರೆ. 1931ರ ಕಾಲಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರು

ಮೈಸೂರು–ಅರಸೀಕೆರೆ, ಬೆಂಗಳುರು-ಚಿಕ್ಕಬಳ್ಳಾಪುರ, ಚಿಕ್ಕಜಾಜೂರು–ಚಿತ್ರದುರ್ಗ, ನಂಜನಗೂಡು–ಚಾಮರಾಜನಗರ, ತರೀಕೆರೆ-ನರಸಿಂಹರಾಜಪುರ, ಶಿವಮೊಗ್ಗ–ಆನಂದಪುರ ಮೊದಲಾದವುಗಳನ್ನು ನಿರ್ಮಾಣ ಮಾಡುತ್ತಾರೆ. ಇಷ್ಟೇ ಅಲ್ಲದೆ ರಸ್ತೆ ಸಾರಿಗೆಯನ್ನು ಗುಣಮಟ್ಟದ ನೆಲೆಯಲ್ಲಿ ಪ್ರಗತಿಗೊಳಿಸಲು ಕರ್ನಾಟಕದ ಜಿಲ್ಲೆಗಳಾದ, ಬೆಂಗಳೂರು – 215 ಮೈಲಿ, ಕೋಲಾರ – 211 ಮೈಲಿ, ತುಮಕೂರು – 189 ಮೈಲಿ, ಚಿತ್ರದುರ್ಗ -220 ಮೈಲಿ, ಮೈಸೂರು – 368 ಮೈಲಿ, ಹಾಸನ – 191 ಮೈಲಿ, ಶಿವಮೊಗ್ಗ – 283 ಮೈಲಿ ಮತ್ತು ಕಡೂರು – 325 ಮೈಲಿಗಳಷ್ಟು ರಸ್ತೆಯನ್ನು ವಿಸ್ತರಿಸಿ ವ್ಯಾಪಾರಿಗಳಿಗೆ, ವಿದ್ಯಾವಂತರಿಗೆ, ಕೈಗಾರೀಕರಣಕ್ಕೆ ಸೌಲಭ್ಯಗಳನ್ನು ಕಲ್ಪಿಸುತ್ತಾರೆ. ಇದರಿಂದ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಿ ವ್ಯವಹರಿಸಲು ಸಾಧ್ಯವಾಯಿತು. ಏಷ್ಯಾದಲ್ಲಿಯೇ ಕರುನಾಡನ್ನು ಬೆಳವಣಿಗೆಯಲ್ಲಿ ಶೀಘ್ರವಾಗಿ ಬೆಳೆಯಲು ಪ್ರಯತ್ನಪಟ್ಟ ಆಡಳಿತಾಧಿಕಾರಿ. ರಾಜನೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರು ಮಾತ್ರವೆಂದು ತಿಳಿಯಲಾಗಿದೆ.

ಭಾರತದ ಹಾಗೂ ಕರ್ನಾಟಕದ ಬೆನ್ನೆಲುಬಾದ ಕೃಷಿಗೆ ಅಪಾರವಾದ ಸೇವೆಯನ್ನು ಒಡೆಯರು ನೀಡಿದ್ದಾರೆ. ಕೃಷಿಯನ್ನು ಜೀವಂತಗೊಳಿಸಬೇಕೆಂದು ರೈತರಿಗೆ ಸುಲಭ ರೀತಿಯಲ್ಲಿ ಸಾಲ ದೊರಕುವಂತೆ 1905 ರಲ್ಲಿ ಸಹಕಾರಿ ಸೊಸೈಟಿಗಳನ್ನು ಸ್ಥಾಪಿಸುತ್ತಾರೆ. ಹಾಗೆಯೇ ಸಹಕಾರಿ ಅಪೆಕ್ಸ್ ಬ್ಯಾಂಕು ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳನ್ನು ಪ್ರಾರಂಭಿಸುತ್ತಾರೆ. ಅಂದು ಜಾರಿಗೊಂಡ ಈ ಬ್ಯಾಂಕುಗಳು ಇಂದಿಗೂ ಸಕ್ರಿಯವಾಗಿ ಕಾರ್ಯನಿರ್ವಹಿಸುವ ಮೂಲಕ ರೈತರಿಗೆ ಸಾಲ ಸೌಲಭ್ಯಗಳನ್ನು ನೀಡುತ್ತಿರುವುದು ಗಮನಾರ್ಹ. ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ರೈತರ ಒಣಭೂಮಿಗೆ ನಾಲ್ವಡಿ ಕೃಷ್ಣರಾಜ ಒಡೆಯರು ನೀರಾವರಿ ಸೌಕರ್ಯವನ್ನು ನೀಡಬೇಕೆಂದು ನಿಶ್ಚಯಿಸಿ ಕಾವೇರಿ ನದಿಗೆ ಅಡ್ಡಲಾಗಿ ಕೃಷ್ಣರಾಜ ಸಾಗರ ಅಣೆಕಟ್ಟನ್ನು ಕಟ್ಟಿಸುತ್ತಾರೆ. ಸುಮಾರು 1,20,000 ಎಕರೆ ಜಮೀನಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸುತ್ತಾರೆ. ರೈತರು ಸಾಲದಲ್ಲಿ ಸಿಲುಕಿ ತಾವು ಉಳುಮೆ ಮಾಡುತ್ತಿದ್ದ ಜಮೀನನ್ನು ಕಳೆದುಕೊಂಡು ಬಿಕಾರಿಗಳಾಗುತ್ತಾರೆ. ಬಡವರಾಗಿ ಊರೂರು ಅಲೆಯುತ್ತಾರೆ ಹಾಗೂ ಜೀವಿಸಲು ಸಾಧ್ಯವಾಗದೇ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂಬ ದೂರದೃಷ್ಟಿಯಿಂದ ರೈತರಿಗೆ ದೇವರಾಗಿ ನೆಲೆಯನ್ನು ನೀಡುತ್ತಾರೆ. 1928 ರಲ್ಲಿ ರೈತರಿಗಾಗಿ ಸಾಲದಿಂದ ಮುಕ್ತರಾಗುವಂತೆ “ಅಗ್ರಿಕಲ್ಚರಿಸ್ಟ್ ಡೆಟ್ ರಿಲೀಫ್ ಆಕ್ಟ್” ಅನ್ನು ಜಾರಿಗೆ ತರುತ್ತಾರೆ. ಕರ್ನಾಟಕ ರಾಜ್ಯದಲ್ಲಿ ರೈತರಿಗೆ ನೀಡಿದ ಸೌಲಭ್ಯಗಳು ಬೇಸಾಯ ನಿರಂತರವಾಗಲು ಸಾಧ್ಯವಾಯಿತು. ವ್ಯವಸಾಯ ಇಲ್ಲದೇ ಹೋಗಿದ್ದರೆ ಕರುನಾಡು ಮಾಯವಾಗುತ್ತಿತ್ತು. ರೈತರು ಬೆಳೆದರೆ ನಾವೆಲ್ಲರೂ ನೆಮ್ಮದಿಯಾಗಿರಲು ಮಾತ್ರ ಸಾಧ್ಯವೆಂದು ತಿಳಿದ ನಾಲ್ವಡಿ ಕೃಷ್ಣರಾಜ ಒಡೆಯರು ರೈತರ ಪರ ನಿಲ್ಲುತ್ತಾರೆ. ರೈತರಿಗಾಗಿ ತಮ್ಮ ತನು-ಮನ-ಧನವನ್ನು ತ್ಯಾಗ ಮಾಡಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ. ಇತಿಹಾಸದಲ್ಲಿಯೇ ನಾಲ್ವಡಿ ಕೃಷ್ಣರಾಜ ಒಡೆಯರಷ್ಟು ರೈತರಿಗೆ ಮಾಡಿದ ಕೊಡುಗೆ ಇನ್ಯಾರು ಮಾಡಿಲ್ಲವೆಂಬುದು ಸತ್ಯ ಸಂಗತಿಯಾಗಿದೆ.

ಬಹಳ ಚಿಂತಿಸಿ 1907 ರಲ್ಲಿ ವಾಣಿವಿಲಾಸ ಸಾಗರ ಅಥವಾ ಮಾರಿ ಕಣಿವೆಯನ್ನು ಕಟ್ಟಿಸುತ್ತಾರೆ. 1911 ರಲ್ಲಿ ಭಾರತದಲ್ಲಿ ಮೊಟ್ಟ ಮೊದಲಿಗೆ ಕೃಷ್ಣರಾಜ ಸಾಗರ ಎಂಬ ಬೃಹತ್

ಜಲಾಶಯವನ್ನು ನಿರ್ಮಿಸುತ್ತಾರೆ. 1911 ರಲ್ಲಿ ಶಿವನ ಸಮುದ್ರದ ಬಳಿಯಲ್ಲಿ ಕಾವೇರಿ ನದಿಯಿಂದ ಜಲವಿದ್ಯುತ್ ಕೇಂದ್ರವನ್ನು ಸ್ಥಾಪಿಸುತ್ತಾರೆ. ಕರ್ನಾಟಕದಲ್ಲಿ ಹೀಗೆ ಜಲವಿದ್ಯುತ್ ಕೇಂದ್ರವನ್ನು ನಿರ್ಮಿಸಿದ್ದು ಭಾರತದಲ್ಲಿ ಹೆಸರುವಾಸಿಯಾಗಲು ಸಾಧ್ಯವಾಗುತ್ತದೆ. ಇದರಿಂದ ನಾಲ್ವಡಿ ಕೃಷ್ಣರಾಜ ಒಡೆಯರ ಕೀರ್ತಿ ದೇಶಾದ್ಯಂತ ಹರಡುತ್ತದೆ. ಯಾವಾಗ ಒಡೆಯರು ಜಲವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಿದರೋ ಅಂದಿನಿಂದಲೇ ಬೀದಿ ದೀಪಗಳು ಉರಿಯಲಾರಂಭಿಸಿದವು. 1905ರ ಆಗಸ್ಟ್ 3 ರಂದು ಬೆಂಗಳೂರಿನಲ್ಲಿ ಪ್ರಥಮವಾಗಿ ಬೀದಿ ದೀಪಗಳು ಬೆಳಗಲು ಅವಕಾಶವಾಯಿತು. ಇಂದು ನಾವೆಲ್ಲರೂ ಬೆಳಕನ್ನು ಕಂಡಿದ್ದೇವೆ ಹಾಗೂ ಅದರಡಿಯಲ್ಲಿ ಜೀವಿಸುತ್ತಿದ್ದೇವೆ ಎಂದರೆ ಒಡೆಯರಿಂದಲೇ ಎಂಬುದನ್ನು ಮರೆಯಬಾರದು.

ಆಸ್ಪತ್ರೆಯು ನಮಗಾಗಿ ಇಪ್ಪತ್ತನಾಲ್ಕು ಗಂಟೆಗಳ ಕಾಲ ಸೇವೆಯನ್ನು ಮಾಡುತ್ತಿವೆ. ಇದರ ಸೌಲಭ್ಯವನ್ನು ನಾಲ್ವಡಿ ಕೃಷ್ಣರಾಜ ಒಡೆಯರಿಂದಲೇ ಪಡೆದಿದ್ದೇವೆ ಎಂದರೆ ಎರಡು ಮಾತಿಲ್ಲ. ಮೈಸೂರಿನಲ್ಲಿ ಕ್ಷಯರೋಗ ಆಸ್ಪತ್ರೆಯನ್ನು ಹಾಗೂ ಬೆಂಗಳೂರಿನಲ್ಲಿ ಮಿಂಟೋ ಕಣ್ಣಿನ ಆಸ್ಪತ್ರೆಯನ್ನು ಸ್ಥಾಪಿಸುತ್ತಾರೆ. ವಾಣಿವಿಲಾಸ ಆಸ್ಪತ್ರೆಯನ್ನು ಹೆಣ್ಣುಮಕ್ಕಳ ಹೆರಿಗೆಗಾಗಿ ಮೀಸಲು ಇಡುತ್ತಾರೆ. ಇನ್ನೂ ಹಲವಾರು ಆಸ್ಪತ್ರೆಗಳನ್ನು ನಿರ್ಮಿಸುವುದರೊಂದಿಗೆ ಆರೋಗ್ಯ ಸೌಲಭ್ಯಗಳನ್ನು ನೀಡುತ್ತಾರೆ. ಉಚಿತವಾಗಿ ತಪಾಸಣೆ, ಔಷಧಿಗಳನ್ನು ಒದಗಿಸಿಕೊಡುತ್ತಾರೆ. ಇದರಿಂದ ಮಹಿಳೆಯರು, ಮುದುಕ, ಮುದುಕಿಯರು ಮೊದಲಾದವರು ನಾಲ್ವಡಿ ಕೃಷ್ಣರಾಜ ಒಡೆಯರು ನೀಡಿದ ಸೌಲಭ್ಯಗಳಿಂದ ರೋಗಮುಕ್ತರಾಗುತ್ತಾರೆ. ತುಂಬೆ ಹೂ ಬೆಳೆಯುವಂತೆ ನಾಲ್ವಡಿ ಕೃಷ್ಣರಾಜ ಒಡೆಯರು ಜನರ ಆರೋಗ್ಯದ ಕಡೆಗೆ ಆಸ್ಥೆಯನ್ನು ವಹಿಸುತ್ತಾರೆ. ಅವರಿಗೆ ನಾಡಿನ ಜನರ ನೆಮ್ಮದಿಗಾಗಿ ಸೌಲಭ್ಯಗಳನ್ನು ನೀಡಬೇಕೆಂಬ ಮಹದಾಸೆ ಇದ್ದುದರಿಂದಲೇ ನಾವೆಲ್ಲರೂ ನೆಮ್ಮದಿಯಾಗಿ ಬದುಕಲು ಸಾಧ್ಯವಾಯಿತು.

ಮೈಸೂರು ರಾಜಮನೆತನದ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ರಾಜರಾದರೂ ಪ್ರಜೆಗಳ ಸುಖವೇ ತನ್ನ ಸುಖವೆಂದು ಭಾವಿಸಿ ಕರ್ನಾಟಕದಲ್ಲಿ ಹೊಸ ಆಡಳಿತವನ್ನು ಸ್ಥಾಪಿಸುತ್ತಾರೆ. ಅಂದರೆ ಪ್ರಜಾಪ್ರಭುತ್ವದ ಧೇಯೋದ್ದೇಶಗಳಿಗೆ ಅನುಸಾರ ನಡೆಯಲು ಮುಂದಾಗುತ್ತಾರೆ. ರಾಜನ ಗುಲಾಮನಾಗಿ ಪ್ರಜೆಗಳು ಇರದಂತೆ ಪ್ರಜೆಗಳಿಗೆ ಸರ್ವ ಸ್ವತಂತ್ರ ಅಧಿಕಾರವನ್ನು ಕೊಟ್ಟಿದ್ದು ನಾಲ್ವಡಿ ಕೃಷ್ಣರಾಜ ಒಡೆಯರ ನಿರಂಕುಶಪ್ರಭುತ್ವ ಕನ್ನಡಿಯಂತೆ ತೋರಿದೆ. ಕರ್ನಾಟಕದ ಉದ್ದಾರಕ್ಕೆ ನಾಂದಿ ಹಾಡಿದವರೇ ಒಡೆಯರು. ಒಡೆಯರು ಮೊದಲ ಸಭೆಯಲ್ಲಿ ಭಾಷಣ ಮಾಡುತ್ತಾ "ನಮ್ಮ ಪ್ರಜೆಗಳಿಗೆ ಅಖಂಡ ಸುಖ ಸಂಪತ್ತನ್ನು ಒದಗಿಸಿಕೊಡಬೇಕೆಂದು ನನ್ನ ಜೀವನದ ಪರಮೋದ್ದೇಶ" ಎಂದು ಘೋಷಣೆಯನ್ನು ಮಾಡುತ್ತಾರೆ. ಇಡೀ ಕರ್ನಾಟಕವನ್ನು "ಭವ್ಯ ಪರಂಪರೆಯ ನಾಡು" ಎಂದು ಕರೆಯಲು ನಾಲ್ವಡಿ ಕೃಷ್ಣರಾಜ ಒಡೆಯರು ಅಂದು ರಾಜ್ಯಕ್ಕೆ ಮಾಡಿದ ಮಹತ್ವದ ಸಾಧನೆಗಳೇ ಕಾರಣವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರು ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯಾನ್ನಾಗಿ ಮಾರ್ಪಡಿಸಿದುದು ಸಹ ಪ್ರಜಾಪರ ಬೆಳವಣಿಗೆಯಾಗಿದೆ. ಹಾಗೆಯೇ ಎಲ್ಲರನ್ನೂ ಕೂಡಿಸಿ ಕಲಾಪಗಳನ್ನು ನಡೆಸುವ ಮುಖೇನ ಕಾಲಕಾಲಕ್ಕೆ

ಚುನಾವಣೆಯನ್ನು ಜಾರಿಗೆ ತರುತ್ತಾರೆ. ಚುನಾವಣೆಯಲ್ಲಿ ಗೆದ್ದಂತಹ ಪ್ರತಿನಿಧಿಗಳು ಜನರಿಂದ ಆಯ್ಕೆಯಾಗಿ ಆಯ-ವ್ಯಯ, ಪ್ರಶ್ನೋತ್ತರಗಳು ಮೊದಲಾದವುಗಳನ್ನು ನಡೆಸುವಂತೆ ಒಡೆಯರು ಅವಕಾಶವನ್ನು ಕಲ್ಪಿಸುತ್ತಾರೆ. ಅವರ ಈ ಹೊಸ ಆಲೋಚನೆಯು ಗುಲಾಮಗಿರಿ ಪದ್ಧತಿಯನ್ನು ನಾಶಮಾಡುವುದಕ್ಕೆ ಸಾಧ್ಯವಾಯಿತು. ಒಡೆಯರು ಪ್ರಜಾನುರಾಗಿಯಾಗಿ ಹಲವಾರು ಆಡಳಿತ ಸುಧಾರಣೆಗಳನ್ನು ಜಾರಿಗೆ ತಂದಿದ್ದರಿಂದ ಕನ್ನಡ ನಾಡು ಪರಂಪರೆಯಲ್ಲಿ ನಕ್ಷತ್ರದಂತೆ ಹೊಳೆಯಲು ಸಾಧ್ಯವಾಯಿತು. 1907 ರಲ್ಲಿ "ನ್ಯಾಯವಿಧೇಯಕ" ಸಭೆಯನ್ನು 60 ಸದಸ್ಯರನ್ನೊಳಗೊಂಡಂತೆ ಸ್ಥಾಪಿಸುತ್ತಾರೆ. 22 ಸದಸ್ಯರು ಜನರಿಂದಲೇ ಚುನಾವಣೆಯಲ್ಲಿ ಆಯ್ಕೆ ಹೊಂದಿ ಮೇಲ್ಮನೆಯಲ್ಲಿ ಕಾರ್ಯ ಕಲಾಪಗಳನ್ನು ನಡೆಸುತ್ತಿತ್ತು. ಈ ಸಭೆಯೂ ಎಲ್ಲಾ ರೀತಿಯಲ್ಲೂ ಅಧಿಕಾರ ನಡೆಸುವ ಸ್ವಾತಂತ್ರ್ಯವನ್ನು ಹೊಂದಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರು ಕನ್ನಡ ನಾಡಿಗೆ ಕೊಟ್ಟ ಕೊಡುಗೆಗೆ ಹೆಣೆಯೇ ಇಲ್ಲ. ಕರ್ನಾಟಕವನ್ನು ಇಡೀ ಪ್ರಪಂಚವೇ ಬೆರಗಾಗಿ ನೋಡುವಂತೆ ಮಾಡಿದ ಸಾಹಸ ಒಡೆಯರದಾಗಿದೆ. ಮೈಸೂರು ಸಂಸ್ಥಾನದ ಜನಪ್ರಿಯ ದೊರೆಯಾದ ನಾಲ್ವಡಿ ಕೃಷ್ಣರಾಜ ಒಡೆಯರು ಶಿಕ್ಷಣಕ್ಕೆ ಹೆಚ್ಚು ಉತ್ತೇಜನ ನೀಡುವಲ್ಲಿ ಆಸಕ್ತರಾಗಿ 1916 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುತ್ತಾರೆ. 1917 ರಲ್ಲಿ ಮಹಾರಾಣಿ ಕಾಲೇಜನ್ನು ಸ್ಥಾಪಿಸಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನೀಡುತ್ತಾರೆ. ಬೆಂಗಳೂರಿನಲ್ಲಿ ಪ್ರಖ್ಯಾತಿಯಾಗಿರುವ ಕೃಷಿ ವಿಶ್ವವಿದ್ಯಾಲಯವನ್ನು ಕೂಡಾ ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಾಪಿಸಿ ಜನರ ಮನ್ನಣೆಗೆ ಒಳಗಾಗಿ ಕೃಷಿಗೆ ಮೊದಲ ಆದ್ಯತೆಯನ್ನು ನೀಡುತ್ತಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯೂ ಇಂದಿಗೂ ಅಸ್ಥಿತ್ವದಲ್ಲಿರುವುದಕ್ಕೆ ಮೂಲ ನೇತಾರರೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರು. 1911 ರಿಂದಲೇ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪ್ರಾರಂಭಿಸುತ್ತಾರೆ. ಅಷ್ಟೇ ಅಲ್ಲದೇ ಪ್ರಾಥಮಿಕ ಶಿಕ್ಷಣ ಕಾಯಿದೆಯನ್ನು ಕಡ್ಡಾಯಗೊಳಿಸಿ ಅಸ್ಪೃಷ್ಯರಿಗೆ ಶಿಕ್ಷಣದ ಅವಕಾಶವನ್ನು ನೀಡುತ್ತಾರೆ. ಒಡೆಯರು ಜಾತಿ ಬೇಧಭಾವ ಮಾಡದೇ ಎಲ್ಲರಿಗೂ ಸಮಾನ ಶಿಕ್ಷಣವನ್ನು ಜಾರಿಗೊಳಿಸಿದ್ದದ್ದು ಅವರು ನಿಸ್ವಾರ್ಥ ಸೇವಾ ಮನೋಭಾವವನ್ನು ತೋರಿಸುತ್ತದೆ. ಒಡೆಯರಿಗೆ ಶಿಕ್ಷಣದ ಮೂಲಕ ಕನ್ನಡ ನಾಡನ್ನು ಉನ್ನತೀಕರಣಗೊಳಿಸಲು ಸಾಧ್ಯವಿದೆಯೆಂದು ಮನಗಂಡಿದ್ದರು. ಆ ಪ್ರಕಾರ ಶಿಕ್ಷಣದ ವಿವಿಧ ಸೌಲಭ್ಯಗಳನ್ನು ಮೊಟ್ಟ ಮೊದಲಿಗೆ ಜಾರಿಗೆ ತರುತ್ತಾರೆ. ಸಮಾಜ ಬದಲಾವಣೆಗೆ ಶಿಕ್ಷಣವೇ ಮೂಲವೆಂದು ಗ್ರಹಿಸಿದ್ದರು. ಮೈಸೂರು ಪೇಪರ್ ಮಿಲ್ಸ್ ಅನ್ನು ಸ್ಥಾಪಿಸಿ ಕನ್ನಡ ನಾಡಿಗೆ ಅವಿಸ್ಮರಣೀಯ ಕೊಡುಗೆಯನ್ನು ನೀಡಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರು ಕರುನಾಡಿನ ಶಿವನ ಸಮುದ್ರದಲ್ಲಿ ಜಲವಿದ್ಯುತ್ ಯೋಜನೆಯನ್ನು 1902 ರಲ್ಲಿ ಜಾರಿಗೊಳಿಸುತ್ತಾರೆ. 1905 ರಲ್ಲಿ ಬೆಂಗಳೂರಿನಲ್ಲಿ ಬೀದಿ ದೀಪಗಳನ್ನು ಹಾಕಿಸಿದ್ದರಿಂದ ಭವಿಷ್ಯದಲ್ಲಿ ಏಷ್ಯಾದಲ್ಲಿಯೇ ಬೆಂಗಳೂರು ಸಿಲಿಕಾನ್ ಸಿಟಿಯಾಗಿ ಮಾರ್ಪಡುತ್ತದೆ.

ಕನ್ನಡ ನಾಡು ನುಡಿಗಾಗಿ ಶ್ರಮಿಸಿದ ರಾಜಮನೆತನದವರೆಂದರೆ ಮೈಸೂರು ರಾಜಮನೆತನವೊಂದೇ, ನಾಲ್ವಡಿ ಕೃಷ್ಣರಾಜ ಒಡೆಯರು ಕನ್ನಡ ನುಡಿ-ಸಾಹಿತ್ಯಕ್ಕಾಗಿ ಪಣತೊಟ್ಟವರು. ಮೈಸೂರು ಸಂಸ್ಥಾನದ ಆಳ್ವಿಕೆಯಿಂದಲೇ ಡಿ.ವಿ.ಜಿ. ಅಂತಹ ಕವಿಗಳು

ಹುಟ್ಟಿಕೊಳ್ಳಲು ಸಾಧ್ಯವಾಯಿತು. ಡಿ.ವಿ.ಜಿ. ಅವರ ಮೈಸೂರು ಸಂಸ್ಥಾನದ ಮೆಚ್ಚುಗೆ ನುಡಿಯೆಂದರೆ “ನನ್ನ ತಿಳುವಳಿಕೆಯಲ್ಲಿ 1881 ರಿಂದ 1940ರ ವರೆಗಿನ ಅವಧಿಯ ವರ್ಷಗಳು ಮೈಸೂರಿನ ಸುವರ್ಣಯುಗ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು” ಎಂದಿದ್ದಾರೆ. ಈ ಮಾತನ್ನು ಹೇಳಬೇಕಾದರೆ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಆಳ್ವಿಕೆಯ ಕಾಲದಲ್ಲಿ ಕನ್ನಡ ಸಾಹಿತ್ಯವನ್ನು ಬೆಳೆಸುವುದಕ್ಕೆ ಮಾಡಿದ ಸೇವೆಗಳೇ ಕಾರಣವೆಂದು ತಿಳಿಯಬಹುದಾಗಿದೆ. ಆಧುನಿಕ ಮೈಸೂರಿನ ನಿರ್ಮಾತೃ ಹಾಗೂ ಆಧುನಿಕ ಕರ್ನಾಟಕದ ರೂವಾರಿ ಅಂತ ಕರೆಯಿಸಿಕೊಂಡಿರುವ ನಾಲ್ವಡಿ ಕೃಷ್ಣರಾಜ ಒಡೆಯರು ಬೆಂಗಳೂರಿನ ಶ್ರೀ ಕೃಷ್ಣರಾಜ ಪರಿಷತ್ತು ಮಂದಿರದಲ್ಲಿ 1915 ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿರುತ್ತಾರೆ. ಒಡೆಯರಿಂದಲೇ ಪರಿಷತ್ತು ಚಾಲನೆಯಾಗಿರುತ್ತದೆ. 1935ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಪರಿಷತ್ತು ಆಗಿ ಬದಲಾಗುತ್ತದೆ. ಅಂದು ಒಡೆಯರು ಸ್ಥಾಪಿಸಿದ ಪರಿಷತ್ತು ಇಂದಿಗೂ ಜೀವಂತವಾಗಿ ಕವಿಮನಸ್ಸುಗಳನ್ನು ತನ್ನೆಡೆಗೆ ಸೆಳೆಯುವ ಕೆಲಸವನ್ನು ಮಾಡುತ್ತಿದೆ. ಕನ್ನಡ ಸಾಹಿತ್ಯದ ಬೆಳವಣಿಗೆ, ವಿಚಾರ ಸಂಕಿರಣಗಳು, ಕವಿಗೋಷ್ಠಿಗಳು, ಚಿಂತನ-ಮಂಥನ ಕಾರ್ಯಕ್ರಮಗಳು ನಿಲ್ಲದೇ ಜೀವಂತಿಕೆಯನ್ನು ಪಡೆದಿವೆ. ಪರಿಷತ್ತು ಕನ್ನಡ ನಾಡು-ನುಡಿಗಾಗಿ ನಿತ್ಯವೂ ಹೊಸ ಹೊಸ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಭಾಷೆಯನ್ನು ಉಳಿಸಲು ಇತರ ಭಾಷೆಗಳೊಂದಿಗೆ ಸೆಣಸಾಟ ನಡೆಸುತ್ತಿದೆ. ಪುಸ್ತಕ ಮಳಿಗೆಯ ಮೂಲಕ ರಿಯಾಯಿತಿ ದರದಲ್ಲಿ ಕನ್ನಡ ಪುಸ್ತಕಗಳನ್ನು ಮಾರಾಟ ಮಾಡುವ ಮೂಲಕ ಪರಿಷತ್ತು ನಾಡನ್ನು ಪ್ರಗತಿಯತ್ತ ಕೊಂಡೊಯ್ಯುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತು ಇಲ್ಲದೇ ಇದ್ದಿದ್ದರೆ ಕನ್ನಡಿಗರಿಗೆ ನೆಲೆಯಿಲ್ಲದಂತಾಗುತ್ತಿತ್ತು. ಕನ್ನಡ ಮಣ್ಣಲ್ಲಿ ಹುಟ್ಟಿದ ಕನ್ನಡಿಗರಿಗೆ ನೆಲ, ಜಲ, ಭಾಷೆಗಳನ್ನು ಸ್ವಾಯತ್ತಗೊಳಿಸಿದ ಕೀರ್ತಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ. ಕನ್ನಡ ನಾಡು-ನುಡಿಗಾಗಿ ಮಾಡಿದ ಘನ ಸೇವೆ ಹಾಗೂ ಕೊಡುಗೆಗಳನ್ನು ಗುರುತಿಸಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ “ರಾಜರ್ಷಿ” ಬಿರುದನ್ನು ನೀಡಿದ್ದು , ಇತಿಹಾಸದಲ್ಲಿ ಮರೆಯದ ಕ್ಷಣವಾಗಿದೆ. ಕನ್ನಡ ನಾಡು-ನುಡಿಗಾಗಿ ಕೈ ಎತ್ತಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಮಿನುಗುವ ನಕ್ಷತ್ರಗಳ ಮಂಡಲದಲ್ಲಿ ಅಜರಾಮರರಾಗಿದ್ದಾರೆ.

## ಪರಾಮರ್ಶನ ಗ್ರಂಥಗಳು:

1. ಗೋಪಾಲ್ ಟಿ. ಎಸ್. (ಲೇ). ಸೋಮೇಶ್ವರ ನಾ. (ಸಂ). (2015). ಎಲ್ಲರೊಳಗೆ ಒಂದಾದ ನಾಲ್ವಡಿ ಕೃಷ್ಣರಾಜ ಒಡೆಯರ್. ನವಕರ್ನಾಟಕ ಪ್ರಕಾಶನ. ಬೆಂಗಳೂರು.
2. ನಂಜರಾಜ ಅರಸ್ ಪಿ. ವಿ. (2015). ಮರೆಯಲಾಗದ ಮಹಾನುಭಾವ ನಾಲ್ವಡಿ ಕೃಷ್ಣರಾಜ ಒಡೆಯರು. ಅಭಿರುಚಿ ಪ್ರಕಾಶನ. ಮೈಸೂರು.
3. ವೇದಾ ಎಂ. ಎಸ್. (2014). ರಾಜ ಒಡೆಯರ್. ಸಂವಹನ ಪ್ರಕಾಶನ. ಮೈಸೂರು.
4. ಚಿನ್ನಸ್ವಾಮಿ ಸೋಸಲೆ ಎನ್. (2018). ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
5. ತಿರುಮಲೆ ತಾತಾಚಾರ್ಯ ಶರ್ಮ. (2006). ಮೈಸೂರು ಇತಿಹಾಸದ ಹಳೆಯ ಪುಟಗಳು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.